ಕರ್ನಾಟಕ ಅರಣ್ಯ ಇಲಾಖೆ

ಹಳಿಯಾಳ ಅರಣ್ಯ ವಿಭಾಗ

**ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ, ಹಳಿಯಾಳ ವಿಭಾಗ, ಹಳಿಯಾಳ-581329**

OFFICE OF THE DEPUTY CONSERVATOR OF FORESTS, HALIYAL DIVISION, HALIYAL-581329

**ದೂರವಾಣಿ:** 08284-220128 **ಫ್ಯಾಕ್ಸ್:** 08284-220365 **ಇ-ಮೇಲ್:** dcfhalyal@gmail.com

ಸಂಖ್ಯೆ: ಸಿ2/ಬಿಯುಡಿ/ವಸತಿ ಗೃಹ ನಿರ್ಮಾಣ/ಟೆಂಡರ/ಸಿಆರ್-3/2019-20 ದಿನಾಂಕ:20-08-2019.

1709

**ಇವರಿಗೆ,**
**ಜಿಲ್ಲಾಧಿಕಾರಿಗಳು,**
**ಹಾಗೂ ಜಿಲ್ಲಾ ಬುಲಟಿನ್ ಅಧಿಕಾರಿಗಳು**
**ಉತ್ತರ ಕನ್ನಡ ಜಿಲ್ಲೆ, ಕಾರವಾರ.**

ಮಾನ್ಯರೇ,

ವಿಷಯ: ಈ ವಿಭಾಗದ ಉಪ ವಲಯ ಅರಣ್ಯ ಅಧಿಕಾರಿ ವಸತಿ ಗೃಹಗಳ ನಿರ್ಮಾಣ ಕಾಮಗಾರಿ ಕೆಲಸದ ಬಗ್ಗೆ ಇ-ಟೆಂಡರ್ ಕರೆಯಲು ಜಾಹೀರಾತು ಪ್ರಕಟಣೆ ಮಾಡುವ ಬಗ್ಗೆ.

........

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹಳಿಯಾಳ ಅರಣ್ಯ ವಿಭಾಗದಲ್ಲಿ 2019-20 ನೇ ಸಾಲಿನಲ್ಲಿ ಈ ವಿಭಾಗದ ಉಪ ವಲಯ ಅರಣ್ಯ ಅಧಿಕಾರಿ ವಸತಿ ಗೃಹಗಳ ನಿರ್ಮಾಣ ಮಾಡಲು ಸದರಿ ಕಾಮಗಾರಿಗಳಿಗೆ ಪಾರದರ್ಶಕ ನಿಯಮಗಳ ಅನುಸಾರ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (http://eproc.karnataka.gov.in) ಇ-ಟೆಂಡರ ಕರೆಯಲಾಗಿದ್ದು, ಈ ಕುರಿತು ಜಾಹೀರಾತು ಪ್ರಕಟಣೆ ಮಾಡುವ ಬಗ್ಗೆ ಟೆಂಡರ ಪ್ರಕಟಣೆಯ 2 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಒಪ್ಪಿಸಿದೆ. ಈ ಪ್ರಕಟಣೆಯನ್ನು ಉತ್ತರ ಕನ್ನಡ ಜಿಲ್ಲೆಯ ಟೆಂಡರ ಬುಲೆಟಿನ್‌ದಲ್ಲಿ ದಿನಾಂಕ: 16-09-2019 ರೊಳಗೆ ಪ್ರಕಟಿಸಿ ಒಂದು ಪ್ರತಿಯನ್ನು ಈ ಕಾರ್ಯಾಲಯಕ್ಕೆ ಕಳುಹಿಸಲು ಗೌರವದೊಂದಿಗೆ ವಿನಂತಿಸಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹಳಿಯಾಳ ವಿಭಾಗ, ಹಳಿಯಾಳ.

ಕರ್ನಾಟಕ ಅರಣ್ಯ ಇಲಾಖೆ

ಹಳಿಯಾಳ ಅರಣ್ಯ ವಿಭಾಗ

# ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ, ಹಳಿಯಾಳ ವಿಭಾಗ, ಹಳಿಯಾಳ-581329

OFFICE OF THE DEPUTY CONSERVATOR OF FORESTS, HALIYAL DIVISION, HALIYAL-581329

ದೂರವಾಣಿ: 08284-220128 ಫ್ಯಾಕ್ಸ: 08284-220365 ಇ-ಮೇಲ್: dcfhalyal@gmail.com

ಸಂಖ್ಯೆ: ಸಿ2/ಬಿಯುಡಿ/ವಸತಿ ಗೃಹ ನಿರ್ಮಾಣ/ಟೆಂಡರ/ಸಿಆರ್-3/2019-20 ದಿನಾಂಕ:20-08-2019.

## ವಸತಿ ಗೃಹ ನಿರ್ಮಾಣ ಕಾಮಗಾರಿಗಳಗಾಗಿ ಇ-ಟೆಂಡರ ಪ್ರಕಟಣೆ
## (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ)

**********

ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವುದೇನೆಂದರೆ, ಹಳಿಯಾಳ ಅರಣ್ಯ ವಿಭಾಗದಲ್ಲಿ 2019-20 ನೇ ಸಾಲಿನಲ್ಲಿ ಈ ವಿಭಾಗದ ಉಪ ವಲಯ ಅರಣ್ಯ ಅಧಿಕಾರಿ ವಸತಿ ಗೃಹಗಳ ನಿರ್ಮಾಣದ ಕಾಮಗಾರಿಗಳಿಗೆ ಪಾರದರ್ಶಕ ನಿಯಮಗಳನುಸಾರ ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹಳಿಯಾಳ ವಿಭಾಗ ಹಳಿಯಾಳ ಇವರ ಕಛೇರಿಯಲ್ಲಿ ಲಭ್ಯವಿರುವ ಅಂದಾಜು ಪತ್ರಿಕೆ/ಸ್ಕೇಚ್/ಡಿಸೈನ್ ಹೊಂದಿರುವ ಕಟ್ಟಡ ನೀರ್ಮಿಸುವ ಕಾಮಗಾರಿಗೆ 2019-20 ನೇ ಸಾಲಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಇ-ಟೆಂಡರ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಈ ಕಛೇರಿಯಲ್ಲಿ 2019-20 ನೇ ಸಾಲಿನಲ್ಲಿ ದಿನಾಂಕ:16-09-2019 ರೊಳಗಾಗಿ ನೊಂದಾಯಿಸಿಕೊಂಡಿರುವ ಅರಣ್ಯ ಗುತ್ತಿಗೆದಾರರು ಟೆಂಡರನಲ್ಲಿ ಭಾಗವಹಿಸಬಹುದಾಗಿದೆ. ಇ-ಟೆಂಡರ್ ವಿವರಗಳು & ಷರತ್ತುಗಳು ಈ ಕೆಳಗಿನಂತಿರುತ್ತವೆ. ಹಾಗೂ ಸರಕಾರದ ಆದೇಶ ಸಂಖ್ಯೆ: ಸಂವ್ಯಶಾಇ/22/ಶಾಸನ/2016 ದಿನಾಂಕ: 29-06-2017 ರ ಪ್ರಕಾರ ಸದರಿ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ ವರ್ಗದವರಿಗೆ ಶೇ. 17.15 ರಷ್ಟು ಸಂಖ್ಯೆಯ ಕಾಮಗಾರಿಯನ್ನು ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ. 6.95 ರಷ್ಟು ಸಂಖ್ಯೆಯ ಕಾಮಗಾರಿಯನ್ನು ನಿಗಧಿಪಡಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸದರಿ ಟೆಂಡರ್‌ದಲ್ಲಿ ಭಾಗವಹಿಸದಿದ್ದಲ್ಲಿ, ಇತರೇ ಟೆಂಡರ್‌ದಾರರು ಭಾಗವಹಿಸಿದಲ್ಲಿ ಸದರಿ ಟೆಂಡರ್‌ದಾರರು ಅರ್ಹರಾಗಿದ್ದಲ್ಲಿ ಅವರಿಗೆ ಟೆಂಡರ್ ನೀಡಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ಇ-ಟೆಂಡರ್ ವಿವರಗಳು & ಷರತ್ತುಗಳು ಈ ಕೆಳಗಿನಂತಿರುತ್ತವೆ. ಹಾಗೂ ಇ-ಟೆಂಡರ್ ವಿವರಗಳು & ಷರತ್ತುಗಳು ಈ ಕೆಳಗಿನಂತಿರುತ್ತವೆ.

| | | |
|---|---|---|
| 1 | **ಟೆಂಡರ ನಡೆಯುವ ಸ್ಥಳ** | ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ |
| 2 | **ಟೆಂಡರ ಹಾಕಲು ಅಂತಿಮ ದಿನಾಂಕ & ವೇಳೆ** | ದಿನಾಂಕ:19-09-2019 ರಂದು ಸಾಯಂಕಾಲ 4.00 ಘಂಟೆವರೆಗೆ ಟೆಂಡರ ಸ್ವೀಕರಿಸಲಾಗುವದು. (ಇ-ಪೋರ್ಟಲ್‌ನಲ್ಲಿ) |
| 3 | **ತಾಂತ್ರಿಕ ಟೆಂಡರ ತೆರೆಯುವ ದಿನಾಂಕ & ವೇಳೆ** | ದಿನಾಂಕ:20-09-2019 ರಂದು ಸಾಯಂಕಾಲ 4.30 ಘಂಟೆಗೆ ತಾಂತ್ರಿಕ ಟೆಂಡರ ತೆರೆಯಲಾಗುವದು. |
| 4 | **ಆರ್ಥಿಕ ಟೆಂಡರ ತೆರೆಯುವ ದಿನಾಂಕ & ವೇಳೆ** | ದಿನಾಂಕ:21-09-2019 ರಂದು ಸಾಯಂಕಾಲ 4.40 ಘಂಟೆಗೆ ಆರ್ಥಿಕ ಟೆಂಡರ ತೆರೆಯಲಾಗುವದು. |
| 5 | **ಟೆಂಡರ ಸ್ವೀಕರಿಸುವ ಅಧಿಕಾರಿಗಳು** | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹಳಿಯಾಳ ವಿಭಾಗ, ಹಳಿಯಾಳ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿ. |
| 6 | **ಕಾಮಗಾರಿ ವಿವರ ಮತ್ತು ನಿಗಧಿಪಡಿಸಿದ ಮೊತ್ತ** | ಅನುಭಂದ-1 ರಲ್ಲಿ ಯುನಿಟ್‌ಗಳ ಮುಂದೆ ಇದ್ದಂತೆ. |
| 7 | **ಇ.ಎಂ.ಡಿ ಮೊತ್ತ (2.50%)** | ಅನುಭಂದ-1, ರಲ್ಲಿ ಆಯಾ ಯುನಿಟ್‌ಗಳ ಮುಂದೆ ಇದ್ದಂತೆ. |
| 8 | **ಮರು ಟೆಂಡರ ದಿನಾಂಕ** | ಈ ಮೇಲಿನ ದಿನಾಂಕದಂದು ಯಾವುದೇ ಟೆಂಡರ ಸ್ವೀಕೃತವಾಗದಿದ್ದಲ್ಲಿ ದಿನಾಂಕ: 25-09-2019 ರಂದು ಮರು ಟೆಂಡರನ್ನು ಸಾಯಂಕಾಲ 4.00 ಘಂಟೆಯವರೆಗೆ ಸ್ವೀಕರಿಸಲಾಗುವದು. |

| | | |
|---|---|---|
| 9 | **ಮರು ಟೆಂಡರನ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ & ವೇಳೆ** | ದಿನಾಂಕ:26-09-2019 ರಂದು ಸಾಯಂಕಾಲ 4.30 ಘಂಟೆಗೆ ಮರು ತಾಂತ್ರೀಕ ಟೆಂಡರ ತೆರೆಯಲಾಗುವದು. |
| 10 | **ಮರು ಟೆಂಡರನ ಆರ್ಥಿಕ ಟೆಂಡರ್ ತೆರೆಯುವ ದಿನಾಂಕ & ವೇಳೆ** | ದಿನಾಂಕ:27-09-2019 ರಂದು ಸಾಯಂಕಾಲ 4.40 ಘಂಟೆಗೆ ಮರು ತಾಂತ್ರೀಕ ಟೆಂಡರ ತೆರೆಯಲಾಗುವದು. |

**ಷರತ್ತುಗಳು:**

1) ಈ ಮೇಲಿನ ಎಲ್ಲ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ಅನುಮೋದನೆ, ಅನುದಾನ ಬಿಡುಗಡೆ ಮತ್ತು ಅಂದಾಜು ಪತ್ರಿಕೆ ಮಂಜೂರಾತಿ ನಿರೀಕ್ಷೆ ಮೇರೆಗೆ ಕರೆಯಲಾಗಿದ್ದು, ಅನುದಾನ ಬಿಡುಗಡೆ ಆಗದೇ ಇದ್ದಲ್ಲಿ, ಕಾಮಗಾರಿಗಳಿಗೆ ನಿಗದಿಪಡಿಸಿದ ಅನುದಾನ ಕಡಿಮೆಯಾದಲ್ಲಿ ಅಥವಾ ಬಿಡುಗಡೆಗೆ ವಿಳಂಬವಾದಲ್ಲಿ ಸದರ ಕಾಮಗಾರಿಗಳನ್ನು ಮುಂದೂಡಲಾಗುವುದು ಅಥವಾ ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು.
2) ಟೆಂಡರ ಪ್ರಕ್ರಿಯೆಯಲ್ಲಿ ಈ ಕೆಳಕಾಣಿಸಿದ ದಾಖಲೆಗಳನ್ನು ಇ-ಪೋರ್ಟಲ್‌ನಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು. ಸದರಿ ದಾಖಲೆಗಳ ಮೂಲ ಪ್ರತಿಗಳನ್ನು ಟೆಂಡರ್ ತೆರೆದ ದಿನಾಂಕದಿಂದ ಎರಡು ದಿವಸದೊಳಗಾಗಿ ಈ ಕೆಳ ಸಹಿದಾರರ ಪರಿಶೀಲನೆಗೆ ಸಲ್ಲಿಸುವುದು.
   - **a.** ಈ ಕಛೇರಿಯಲ್ಲಿ 2019-20ನೇ ಸಾಲಿನಲ್ಲಿ ದಿನಾಂಕ: 16-09-2019 ರೊಳಗಾಗಿ ಅರಣ್ಯ ಇಲಾಖೆಯ ಗುತ್ತಿಗೆದಾರರೆಂದು ನೊಂದಾಯಿಸಿಕೊಂಡ ಅಥವಾ ನವೀಕರಿಸಿಕೊಂಡ ಪ್ರಮಾಣ ಪತ್ರದ ಪ್ರತಿ,
   - **b.** ಚಾಲ್ತಿಯಲ್ಲಿರುವ ಆದಾಯ ಕರ(2018-19), ಜಿ.ಎಸ್.ಟಿ ಕರ ತೀರಿಕೆ ಪ್ರಮಾಣ ಪತ್ರ(2018-19), ಹಾಗೂ ಹಿಂದಿನ ಎರಡು ಆರ್ಥಿಕ ವರ್ಷಗಳಲ್ಲಿ ಆದಾಯ ಮತ್ತು ನಷ್ಟದ ಬಗ್ಗೆ ಚಾರ್ಟರ್ಡ ಅಕೌಂಟಂಟ್‌ರವರಿಂದ ಅಡಿಟ್ ಮಾಡಿಸಿದ ಬ್ಯಾಲೆನ್ಸ್‌ಶೀಟ್ ಪ್ರಮಾಣ ಪತ್ರ(2017-18, 2018-19)ದ ಪ್ರತಿಗಳನ್ನು ಸಲ್ಲಿಸುವುದು.
   - **c.** ಸರಕಾರ / ಸರಕಾರೇತರ ಅಥವಾ ಸಂಘ ಸಂಸ್ಥೆಗಳಿಂದ ಗುತ್ತಿಗೆದಾರರು ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಂಡಿರುವ ಕುರಿತು ಅನುಭವದ ದೃಢೀಕೃತ ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. ಹಾಗೂ ಟೆಂಡರ್ ಹಾಕುವ ಕಾಮಗಾರಿ ಮೊತ್ತಕ್ಕೆ ಶೇ. 50% ರಷ್ಟು ಅಥವಾ ಅದಕ್ಕಿಂತ ಹೆಚ್ಚು ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು. (ಹೊಸದಾದ ಕಟ್ಟಡ ನಿರ್ಮಾಣ ಕಾಮಗಾರಿ ಮಾತ್ರ).
   - **d.** ಲೋಕೊಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರೆಂದು ನೊಂದಾಯಿಸಿಕೊಂಡಿರಬೇಕು.
   - **e.** ಆಧಾರ ಕಾರ್ಡ ಮತ್ತು ಪ್ಯಾನ ಕಾರ್ಡ ಪ್ರತಿ ಲಗತ್ತಿಸುವುದು.
   - **f.** ಜಿ.ಎಸ್.ಟಿ ರಜಿಸ್ಟ್ರೀಶನ ಪ್ರಮಾನ ಪತ್ರ ಲಗತ್ತಿಸುವುದು.
   - **g.** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರವನ್ನು ಕಂದಾಯ ಇಲಾಖೆಯವರಿಂದ ಪಡೆದ ಪ್ರತಿ ಲಗತ್ತಿಸುವುದು.
3) ಒಂದು ವೇಳೆ ಮೇಲೆ ತಿಳಿಸಿದ ಟೆಂಡರ್ ತೆರೆಯುವ ದಿನಾಂಕದಂದು ರಜಾ ದಿನಗಳೆಂದು ಘೋಷಿಸಿದಲ್ಲಿ ಮರು ಕೆಲಸದ ದಿನ ಮತ್ತು ಅದೇ ವೇಳೆಗೆ ಟೆಂಡರ ಪ್ರಕ್ರಿಯೆ ತೆರೆಯಲಾಗುವುದು.
4) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹಳಿಯಾಳ ವಿಭಾಗ,. ಹಳಿಯಾಳ ಇವರು ಟೆಂಡರಗಳನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.
5) ಗುತ್ತಿಗೆದಾರರು ಹಾಲಿ ನಿರ್ವಹಿಸುತ್ತಿರುವ ಕಾಮಗಾರಿಗಳ ವಿವರವನ್ನು ನಿಗಧಿತ ನಮೂನೆ 1.3(A) ಮತ್ತು 1.3(B), 1.4(A&B) ಕಡ್ಡಾಯವಾಗಿ ನೀಡುವುದು.
6) ಪ್ರತಿಯೊಂದು ಯುನಿಟ್‌ನ ಐಟಂಗಳಿಗೆ ಪ್ರತ್ಯೇಕವಾಗಿ ದರ ನಮೂದಿಸುವುದು. ಹಾಗೂ ಯುನಿಟ್‌ನಲ್ಲಿರುವ ಅಂದಾಜು ಮೊತ್ತಕ್ಕೆ ಸಮನಾಗಿ / ಕಡಿಮೆ ಬಿಡ್ ಮಾಡಿದ್ದಲ್ಲಿ ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ಈ ಕಾಮಗಾರಿಗಳಿಗೆ ಟೆಂಡರ ದರ /ಮೊತ್ತಕ್ಕಿಂತ ಹೆಚ್ಚಿನ ದರ/ ಮೊತ್ತವನ್ನು ನೀಡಲಾಗುವದಿಲ್ಲ. ಹೆಚ್ಚು ಮೊತ್ತಕ್ಕೆ ಬಿಡ್ ಮಾಡಿದ್ದಲ್ಲಿ ಸದರಿ ಬಿಡ್‌ನ್ನು ತಿರಸ್ಕರಿಸಲಾಗುವುದು.
7) ಟೆಂಡರನಲ್ಲಿ ಭಾಗವಹಿಸುವ ಅರಣ್ಯ ಗುತ್ತಿಗೆದಾರರು/ಸಂಸ್ಥೆಯವರು ಅರಣ್ಯ ಮೊಕದ್ದಮೆ/ಇತರೆ ಯಾವುದೇ ಕ್ರಿಮಿನಲ್ ಮೂಕದ್ದಮೆಗಳನ್ನು ಎದುರಿಸುತ್ತಿರುವರು ಹಾಗೂ ಅರಣ್ಯ ಇಲಾಖೆಯ ಯಾವುದೇ ವಿಭಾಗದಲ್ಲಿ ಕಳೆದ ಹತ್ತು ವರ್ಷದ ಅವದಿಯಲ್ಲಿ ಡಿಫಾಲ್ಟರ್ ಆದವರು/ ಕಪ್ಪು ಪಟ್ಟಿಯಲ್ಲಿ ಸೇರಿದವರು/ ಕಾಮಗಾರಿಯನ್ನು ಪೂರ್ಣಗೊಳಿಸದೇ ಬಿಟ್ಟು ಹೋದವರು ಟೆಂಡರನಲ್ಲಿ ಭಾಗವಹಿಸಲು ಅವಕಾಶವಿರುವದಿಲ್ಲ.
8) ಕಡಿಮೆ ಹಾಗೂ ಮುಂದಿನ ಅತೀ ಕಡಿಮೆ ಬಿಡ್ ಮಾಡಿದ ಟೆಂಡರದಾರರ ಇ.ಎಂ.ಡಿ. ಮೊತ್ತವನ್ನು ಹೊರತುಪಡಿಸಿ ಉಳಿದೆಲ್ಲ ಟೆಂಡರದಾರರ ಇ.ಎಂ.ಡಿ. ಹಣವನ್ನು ಇ-ಪೇಮೆಂಟ್ ಮುಖಾಂತರ